ರಾಜೀವ್ ಚಂದ್ರಶೇಖರ್
ಸಂಸತ್ ಸದಸ್ಯರು

19 ನೇ ಫೆಬ್ರವರಿ 2015

**ಸನ್ಮಾನ್ಯ ಸಿದ್ದರಾಮಯ್ಯ ನವರೇ,**

ಅರ್ಕಾವತಿ ಲೇಔಟ್ ಮರು-ಮಾರ್ಪಾಡುಗಳಿಗೆ ಸಂಬಂಧಿಸಿದಂತೆ ಹೊರಡಿಸಲಾಗಿರುವ ಅಧಿಸೂಚನೆಯ ಕುರಿತು ತಮಗೆ ಈ ಪತ್ರವನ್ನು ಬರೆಯುತ್ತಿದ್ದೇನೆ.

ಈ ವಿಷಯದ ಬಗ್ಗೆ ಆರೋಪ ಪ್ರತ್ಯಾರೋಪಗಳು ನಡೆಯುತ್ತಲೇ ಇದ್ದರೂ, ಕೆಲವು ಮೂಲಭೂತ ಸತ್ಯಸಂಗತಿಗಳತ್ತ ನಾಡಿನ ಮುಖ್ಯಮಂತ್ರಿಗಳಾದ ತಮ್ಮ ಗಮನವನ್ನು ಸೆಳೆಯಲು ಬಯಸುತ್ತೇನೆ.

ಪ್ರಸಕ್ತ, ಭೂಮಿ ಹಂಚಿಕೆ, ಭೂ ವ್ಯವಹಾರ, ಸಾರ್ವಜನಿಕ ಭೂಮಿಯ ಬಳಕೆ, ವಲಯವಾರು ವಿಂಗಡನೆ ಮತ್ತು ಆಡಳಿತಾತ್ಮಕ ವಿವೇಚನಾಧಿಕಾರದಲ್ಲಿ ರಾಜಕೀಯ ಹಸ್ತಕ್ಷೇಪಗಳು ಸರ್ಕಾರ / ರಾಜಕಾರಣದಲ್ಲಿ ಭ್ರಷ್ಟಾಚಾರದ ಮೂಲ ಆಕರಗಳಾಗಿ ಪರಿವರ್ತನೆಯಾಗಿವೆ. ಆ ಮೂಲಕ ಈ ಪ್ರಕ್ರಿಯೆಗಳು, ರಾಜಕೀಯ ಪಕ್ಷಗಳಿಗೆ ಮತ್ತು ಅವುಗಳ ಕಾರ್ಯಗಳಿಗೆ ಆರ್ಥಿಕ ಸಂಪನ್ಮೂಲವಾಗಿಬಿಟ್ಟಿದೆ. ನಮ್ಮ ರಾಜಕಾರಣದಲ್ಲಿ ರಿಯಲ್ ಎಸ್ಟೇಟ್ ಮತ್ತು ಭೂವ್ಯವಹಾರಗಳ ಪ್ರಭಾವಕ್ಕೆ ಸಾಕಷ್ಟು ಪುರಾವೆಗಳಿದ್ದು ಅದು ಖಂಡಿತವಾಗಿಯೂ ತಮ್ಮ ಗಮನಕ್ಕೆ ಬಂದಿರುತ್ತದೆ.

ಈ ಹಿನ್ನೆಲೆಯಲ್ಲಿ ಮತ್ತು ವಿಶೇಷವಾಗಿ, ತಾವು ಚುನಾವಣಾ ಸಮಯದಲ್ಲಿ ನೀಡಿದ "ಉತ್ತಮ ಆಡಳಿತ "ದ ಆಶ್ವಾಸನೆಯ ಕಾರಣದಿಂದ ಹಾಗೂ ನಾಡಿನ ಪ್ರಜೆಗಳನ್ನು ಬಾಧಿಸುತ್ತಿರುವ ಭೂಹಗರಣದ ಗೋಜಲುಗಳನ್ನು ತಾವು ಸಮರ್ಥವಾಗಿ ನಿರ್ವಹಿಸಬೇಕೆಂಬ ಕಾಳಜಿಯಿಂದ, ಈ ಮನವಿಯನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಈ ನೋಟಿಫೈ-ಡಿನೋಟಿಫೈ ಪ್ರಕ್ರಿಯೆಯೇ ಭ್ರಷ್ಟಾಚಾರದ ಒಂದು ದೊಡ್ಡ ಆಕರವಾಗಿ ಇವತ್ತು ಬದಲಾಗಿದೆ. ಭೂ ಅಧಿಸೂಚನೆ, ನಂತರ ಡಿನೋಟಿಫಿಕೇಷನ್, ಇದರ ಸುತ್ತ ಹೆಣೆದುಕೊಂಡ ಭ್ರಷ್ಟಾಚಾರ - ಇವುಗಳು ಒಂದು ಸಿದ್ಧ ಮಾದರಿಯಂತೆ ನಡೆಯುತ್ತಲೇ ಇದೆ. ಸರ್ಕಾರ ಅತ್ಯಂತ ಪರಿಶ್ರಮ ಹಾಗೂ ಜನರ ಹಣವನ್ನು ವ್ಯಯಿಸಿ ಭೂಮಿಯನ್ನು ಸಾರ್ವಜನಿಕ ಉಪಯೋಗಕ್ಕಾಗಿ ಅಭಿವೃದ್ಧಿಪಡಿಸುತ್ತದೆ. ಇದರಿಂದ ಸಹಜವಾಗಿ ಅಲ್ಲಿ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ

...2..

11ನೇ ಮಹಡಿ, ದೊಡ್ಡ ಗೋಪುರ, ಸರ್ ಎಂ. ವಿಶ್ವೇಶ್ವರಯ್ಯ ಕೇಂದ್ರ, ಡಾ॥ ಅಂಬೇಡ್ಕರ್ ವೀಧಿ, ಬೆಂಗಳೂರು - 560 001.
ದೂರವಾಣಿ : 91-80-22863600, ದೂರವಾಣಿ / ಫ್ಯಾಕ್ಸ್ : 91-80-22863680
ಅಂತರ್ಜಾಲ ವಿಳಾಸ : rajeev.c@nic.in
www.rajeev.in / ham:VU2RCL

सत्यमेव जयते



ಭೂಮಿಯ ಬೆಲೆಯಲ್ಲಿ ಏರಿಕೆಯಾಗುತ್ತದೆ. ಹೀಗೆ ಅಭಿವೃದ್ಧಿ ಹೊಂದಿದ ಪ್ರದೇಶಗಳಲ್ಲಿಯೇ ಡಿನೋಟಿಫಿಕೇಷನ್ ನಡೆಯುವುದು ಕಾಕತಾಳೀಯವೇನೂ ಅಲ್ಲ. ಕೇವಲ ಪಟ್ಟಭದ್ರ ಹಿತಾಸಕ್ತಿಗಳ ಅನುಕೂಲಕ್ಕಾಗಿಯೇ ಇಂತಹ ಡಿನೋಟಿಫಿಕೇಷನ್ ಮಾಡಲಾಗಿರುವುದಕ್ಕೆ ಹಿಂದಿನ ಅನೇಕ ಪ್ರಕರಣಗಳು ಸಾಕ್ಷಿಯಾಗಿದೆ.

ಸಾರ್ವಜನಿಕ ಭೂಪ್ರದೇಶಗಳ ಅನಿಯಂತ್ರಿತ ಅಧಿಸೂಚನೆ ಮತ್ತು ನಂತರ ಡಿನೋಟಿಫಿಕೇಷನ್ ವಿಚಾರದಲ್ಲಿ ನಾನು ಈ ಹಿಂದೆಯೇ ಅಂದರೆ ಫೆಬ್ರವರಿ 5, 2010 ರಲ್ಲಿ ಅಂದಿನ ಮುಖ್ಯಮಂತ್ರಿಗಳಿಗೆ ಪತ್ರವನ್ನು ಬರೆದು (ಪ್ರತಿ ಲಗತ್ತಿಸಿದೆ) ಪಟ್ಟಭದ್ರ ಹಿತಾಸಕ್ತಿಗಳಿಗೆ ನೆರವಾಗುವ ಈ ಪದ್ಧತಿಯನ್ನು ಕೈಬಿಡುವ ಜೊತೆಗೆ ಸಮಗ್ರ ಪ್ರಕ್ರಿಯೆಯಲ್ಲಿ ಸುಧಾರಣೆಗಾಗಿ ಕೆಲವು ಸಲಹೆಗಳನ್ನು ನೀಡಿದ್ದೆ. ಅವುಗಳನ್ನು ತಮ್ಮ ಅವಗಾಹನೆಗಾಗಿ ಮತ್ತೆ ಉಲ್ಲೇಖಿಸುತ್ತಿದ್ದೇನೆ.

1. ಆಡ್-ಹಾಕ್ ನೋಟಿಫಿಕೇಷನ್ (ತಾತ್ಕಾಲಿಕ ಅಧಿಸೂಚನೆ) ಮತ್ತು ಡಿನೋಟಿಫಿಕೇಷನ್ (ಅಧಿಸೂಚನೆ ಹಿಂಡೆತ) ಪ್ರಕ್ರಿಯೆಯನ್ನು ಸಂಪೂರ್ಣ ರದ್ದು ಮಾಡಬೇಕು.

2. ಶಾಲೆ, ಉದ್ಯಾನವನ, ಆಸ್ಪತ್ರೆ ಮುಂತಾದ ನ್ಯಾಯಯುತ ಹಾಗೂ ಕಾನೂನು ರೀತ್ಯಾ ಸಮರ್ಥನೀಯ ಸಾರ್ವಜನಿಕ ಹಿತಾಸಕ್ತಿಗಳನ್ನು ಹೊರತುಪಡಿಸಿ ಇನ್ನಿತರ ಯಾವುದೇ ಕಾರಣಗಳಿಗೆ ಮತ್ತು ವಿಶೇಷವಾಗಿ ಖಾಸಗಿ ವಾಣಿಜ್ಯ ಹಿತಾಸಕ್ತಿಗಳ ಅನುಕೂಲಕ್ಕೆ ಭೂಮಿಯ ಡಿನೋಟಿಫಿಕೇಷನ್ ಮತ್ತು ಅಧಿಸೂಚನೆಗಳನ್ನು ನಿಷೇಧಿಸಬೇಕು.

3. ಸರ್ಕಾರ ತನ್ನ ಪ್ರಸಕ್ತ ಭೂಮಿ ನಿರ್ವಹಣೆಯ ಪ್ರಕ್ರಿಯಾ ವಿಧಾನಗಳನ್ನು ಕೈಬಿಟ್ಟು ಪಾರದರ್ಶಕ ಮತ್ತು ಮುಕ್ತವಾದ ಪ್ರಕ್ರಿಯಾ ವಿಧಾನವನ್ನು ಅಳವಡಿಸಿಕೊಳ್ಳಬೇಕು.

4. ಖನಿಜ, ತರಂಗಾಂತರಗಳಂತೆ ಸಾರ್ವಜನಿಕ ಭೂಮಿಯೂ ಕೂಡ ಸಂಪನ್ಮೂಲವಾಗಿದ್ದು, ಸರ್ಕಾರ ಇದನ್ನು ಬಳಸುವಾಗ ಅಷ್ಟೇ ಕಾಳಜಿ ಮತ್ತು ಎಚ್ಚರಿಕೆಯನ್ನು ವಹಿಸಿ, ಪ್ರಜೆಗಳ ಸೌಲಭ್ಯದ ಉದ್ದೇಶಗಳಿಗೆ ಮತ್ತು ಸಾಮಾಜಿಕ ಹಾಗೂ ಮೂಲಸೌಲಭ್ಯವೃದ್ಧಿಗೆ ಅನುಕೂಲವಾಗುವಂತೆ ಬೊಕ್ಕಸ ಭರಿಸಲು ಮಾತ್ರವೇ ಉಪಯೋಗಿಸಬೇಕು.

...3..

ಈ ರೀತಿಯ ಸುಧಾರಣಾ ಕ್ರಮಗಳನ್ನು ಜಾರಿಗೆ ತಂದು ಸಮಾಜಕ್ಕೆ ಕಂಟಕವಾಗಿರುವ ಈ ನೋಟಿಫಿಕೇಷನ್ / ಡಿನೋಟಿಫಿಕೇಷನ್ ದುರ್ಬಳಕೆ ಪಿಡುಗನ್ನು ಹತ್ತಿಕ್ಕುವ ಮೂಲಕ ತಮ್ಮ "ಉತ್ತಮ ಆಡಳಿತ"ದ ವಾಗ್ದಾನವನ್ನು ಸಾಕಾರಗೋಳಿಸಬೇಕೆಂದು ಈ ಮೂಲಕ ಒತ್ತಾಯಿಸುತ್ತಿದ್ದೇನೆ. ಭ್ರಷ್ಟಾಚಾರ ಮತ್ತು ಭೂ ವ್ಯವಹಾರಗಳಿಂದ ರಾಜಕೀಯ ಪೋಷಣೆಯನ್ನು ಸಂಪೂರ್ಣವಾಗಿ ತೊಡೆದು ಹಾಕುವ ಸಮಯ ಬಂದಿದೆ.

ಈ ಕುರಿತು ತಮ್ಮ ಕ್ರಮಗಳನ್ನು ಎದುರು ನೋಡುತ್ತಿದ್ದೇನೆ.

ತಮ್ಮ ವಿಶ್ವಾಸಿ,

**ರಾಜೀವ್ ಚಂದ್ರಶೇಖರ್**

**ಶ್ರೀ ಸಿದ್ದರಾಮಯ್ಯ ನವರು**
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ
ಬೆಂಗಳೂರು.

**<u>ಪ್ರತಿಯನ್ನು:-</u>**

ಕಾರ್ಯದರ್ಶಿಗಳು, ನ್ಯಾ. ಕೆಂಪಣ್ಣ ತನಿಖಾ ಆಯೋಗ, 6ನೇ ಮಹಡಿ, ಬಿಡಬ್ಲ್ಯೂಎಸ್ಎಸ್‌ಬಿ ಕಟ್ಟಡ, ಕಾವೇರಿ ಭವನ, ಬೆಂಗಳೂರು.